# ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹೊನ್ನಾಳಿ

## ಸಿ.ಸಿ.**1045/2020**

ಸಾಕ್ಷಿದಾರರ ಹೇಳಿಕೆಃ

| | | |
|---|---|---|
| **ಹೆಸರು** | ಮುಸ್ತಫಾ | ಚಾಸಾಃ **18** ಪ್ರಾಸಾಃ **7** |
| **ತಂದೆಯ ಹೆಸರು** | ಎಂ ಇಮಾಮ್ ಸಾಬ್ | |
| **ವಯಸ್ಸು** | 65 ವರ್ಷ | |
| **ವೃತ್ತಿ** | ನಿವೃತ್ತ ಎ ಎಸ್ ಐ | |
| **ವಾಸಸ್ಥಳ** | ಹರಿಹರ | |

ದಿನಾಂಕಃ 11-02-2026 ರಂದು ಸಾಕ್ಷಿಯನ್ನು ಕರೆದು ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ :-ಮಾನ್ಯ ಸ.ಸ.ಅ. ರವರಿಂದ:-

ನಾನು ದಿಃ 19-08-2019 ರಿಂದ ದಿಃ 30-06-2021 ರವರಿಗೆ ಹೊನ್ನಾಳಿ ಪೊಲೀಸ್ ಠಾಣೆಯಲ್ಲಿ ಎ ಎಸ್ ಐ ಆಗಿ ಕರ್ತವ್ಯ ನಿರ್ವಹಿಸಿದ್ದೆನು.

ದಿಃ 01-03-2020 ರಂದು ಈ ಪ್ರಕರಣದ ಕಡತವನ್ನು ಚಾಸಾ-17 ರವರಿಗೆ ಪಡೆದುಕೊಂಡು ಅಲ್ಲಿಯವರೆಗೂ ಆದ ತನಿಖೆಯನ್ನು ಪರಿಶೀಲಿಸಿ ತನಿಖೆಯನ್ನು ಮುಂದುವರೆಸಿ, ನಂತರ ಅದೇ ದಿನ ಮಲೇಬೆನ್ನೂರು ಸಮುದಾಯ ಆರೋಗ್ಯ ಕೇಂದ್ರಕ್ಕೆ ಹೋಗಿ ಮೃತ ಎಂ ಚಂದ್ರಶೇಖರಪ್ಪ ರವರ ಶವಪಂಚನಾಮೆಯನ್ನು ಮಾಡಲು ಚಾಸಾ-4 ಮತ್ತು 9 ರವರಿಗೆ ನೋಟೀಸನ್ನು ಜಾರಿ ಮಾಡಿ ನಂತರ ಚಾಸಾ-4 ಮತ್ತು 9 ರವರ ಸಮಕ್ಷಮ ಮೃತನ ರಕ್ತಸಂಬಂಧಿಕರಾದ ಚಾಸಾ-10, 11 ಮತ್ತು 12 ರವರ ಸಮಕ್ಷಮ ಶವಪಂಚನಾಮೆಯನ್ನು ಸಂಜೆ 04-30 ರಿಂದ 06-30 ಗಂಟೆ ಸಮಯದಲ್ಲಿ ಜರುಗಿಸಿ, ಛಾಯಾಚಿತ್ರಗಳನ್ನು ತೆಗೆದು ಚಾಸಾ-9, 10, 11 ಮತ್ತು 12 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ನಂತರ ಮೃತ ಎಂ ಚಂದ್ರಶೇಖರಪ್ಪನ ಶವಗಾವಲು ಮಾಡಲು ಚಾಸಾ-16

ರವರನ್ನು ನೇಮಕ ಮಾಡಿ ಮತ್ತು ಮೃತನ ಪಿ ಎಂ ವರದಿ ಆದ ನಂತರ ಚಾಸಾ-16 ರವರು ಮೃತ ದೇಹವನ್ನು ಅವರ ರಕ್ತ ಸಂಬಂಧಿಕರಿಗೆ ಹಸ್ತಾಂತರಿಸಿರುತ್ತಾರೆ. ನಂತರ ಚಾಸಾ-1 ರವರ ಮರುಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ.

ದಿಃ 02-03-2020 ರಂದು ಅಪಘಾತವಾದ ಸ್ಥಳಕ್ಕೆ ಭೇಟಿ ನೀಡಿ ಚಾಸಾ-5 ಮತ್ತು 6 ರವರಿಗೆ ನೋಟೀಸನ್ನು ಜಾರಿ ಮಾಡಿ ನಂತರ ಚಾಸಾ-1 ರವರು ಸ್ಥಳ ತೋರಿಸಿದ ಮೇರೆಗೆ ಸ್ಥಳ ಮಹಜರ್ ಕ್ರಮವನ್ನು ಮದ್ಯಾಹ್ನ 02-00 ರಿಂದ 03-00 ಗಂಟೆ ಸಮಯದಲ್ಲಿ ಚಾಸಾ-5 ಮತ್ತು 6 ರವರ ಸಮಕ್ಷಮ ಮಹಜರ್ ಕ್ರಮ ಜರುಗಿಸಿ, ಕಚ್ಚ ನಕಾಶೆಯನ್ನು ತಯಾರಿಸಿ, ನಿಪಿ-10 ರಿಂದ 12 ಛಾಯಾಚಿತ್ರಗಳನ್ನು ತೆಗೆದಿರುತ್ತೇನೆ.

ನಂತರ ಚಾಸಾ-5 ಮತ್ತು 6 ರವರಿಗೆ ನೋಟೀಸನ್ನು ಜಾರಿ ಮಾಡಿ ಅದೇ ದಿನ ಕೂಲಂಬಿ ಉಪ ಠಾಣೆಯ ಆವರಣದಲ್ಲಿ ಚಾಸಾ-5, 6 ಮತ್ತು 1 ರವರ ಸಮಕ್ಷಮ ಟ್ರ್ಯಾಕ್ಟರ್ ಇಂಜಿನ್ ನಂ.ಕೆಎ-17/ಟಿಬಿ-9599 ಮತ್ತು ಟ್ರೇಲರ್ ಮತ್ತು ಮೋಟಾರ್ ಸೈಕಲ್ ನಂ.ಕೆಎ-27/ಯು-7224 ಅನ್ನು ಅಮಾನತ್ತು ಪಡಿಸಿಕೊಂಡು ಅಮಾನತ್ತು ಮಹಜರ್ ಕ್ರಮವನ್ನು ಮದ್ಯಾಹ್ನ 03-30 ರಿಂದ 04-30 ಗಂಟೆ ಸಮಯದಲ್ಲಿ ಜರುಗಿಸಿ ನಿಪಿ-15 ರಿಂದ 20 ಛಾಯಾಚಿತ್ರಗಳನ್ನು ತೆಗೆದಿರುತ್ತೇನೆ. ಶವಪಂಚನಾಮೆ, ಸ್ಥಳ ಮತ್ತು ಅಮಾನತ್ತು ಮಹಜರ್ ಸಮಯದಲ್ಲಿ ಚಾಸಾ-16 ರವರು ಛಾಯಾಚಿತ್ರಗಳನ್ನು ತೆಗೆದಿರುತ್ತಾರೆ. ಚಾಸಾ-5 ಮತ್ತು 6 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ನಂತರ ಕಡತವನ್ನು ಚಾಸಾ-19 ರವರಿಗೆ ಮುಂದಿನ ತನಿಖೆಗಾಗಿ ಹಸ್ತಾಂತರಿಸಿರುತ್ತೇನೆ.

ಚಾಸಾ-5 ಮತ್ತು 6 ರವರಿಗೆ ನೀಡಿದ ನೋಟೀಸನ್ನು ಈಗಾಗಲೇ ನಿಪಿ-7 ಎಂದು ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ-7(ಸಿ) ಎಂದು, ಸ್ಥಳ ಮಹಜರ್ ಅನ್ನು ಈಗಾಗಲೇ ನಿಪಿ-8 ಎಂದು ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ-8(ಸಿ) ಎಂದು, ಕಚ್ಚ ನಕಾಶೆಯನ್ನು ಈಗಾಗಲೇ ನಿಪಿ-9 ಎಂದು ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ-9(ಸಿ) ಎಂದು, ಚಾಸಾ-5 ಮತ್ತು 6 ರವರಿಗೆ ಅಮಾನತ್ತು ಮಹಜರ್ ಸಮಯದಲ್ಲಿ ನೀಡಿದ ನೋಟೀಸನ್ನು ಈಗಾಗಲೇ ನಿಪಿ-13 ಎಂದು ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ-13(ಸಿ) ಎಂದು, ಅಮಾನತ್ತು ಮಹಜರ್ ಅನ್ನು ಈಗಾಗಲೇ ನಿಪಿ-14 ಎಂದು ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ-14(ಸಿ) ಎಂದು, ಚಾಸಾ-6 ರವರ

ಹೇಳಿಕೆಯನ್ನು ಈಗಾಗಲೇ ನಿಪಿ-22 ಎಂದು ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ-22(ಎ) ಎಂದು,ಚಾಸಾ-5 ರವರ ಹೇಳಿಕೆಯನ್ನು ಈಗಾಗಲೇ ನಿಪಿ-23 ಎಂದು ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ-23(ಎ) ಎಂದು, ಶವಪಂಚನಾಮೆಯನ್ನು ನಿಪಿ-26 ಎಂದು, ಸಾಕ್ಷಿಯ 2 ಸಹಿಗಳನ್ನು ನಿಪಿ-26(ಎ) ಮತ್ತು (ಬಿ) ಎಂದು, ಶವಪಂಚನಾಮೆಯ ಸಮಯದಲ್ಲಿ ತೆಗೆದ 6 ಛಾಯಾಚಿತ್ರಗಳನ್ನು ನಿಪಿ-27 ರಿಂದ 32 ಎಂದು ಗುರುತಿಸಲಾಯಿತು.

<u>ಪಾಟೀ ಸವಾಲು:- ಆರೋಪಿ ಪರ ವಕೀಲರರಿಂದ:-</u>

ಮಲೇಬೆನ್ನೂರು ಸಮುದಾಯ ಆರೋಗ್ಯ ಕೇಂದ್ರಕ್ಕೆ ಹೋಗಿ ಮೃತ ಎಂ ಚಂದ್ರಶೇಖರಪ್ಪ ರವರ ಶವಪಂಚನಾಮೆಯನ್ನು ಮಾಡಲು ಚಾಸಾ-4 ಮತ್ತು 9 ರವರಿಗೆ ನೋಟೀಸನ್ನು ಜಾರಿ ಮಾಡಿಲ್ಲ, ಚಾಸಾ-4 ಮತ್ತು 9 ರವರ ಸಮಕ್ಷಮ ಮೃತನ ರಕ್ತಸಂಬಂಧಿಕರಾದ ಚಾಸಾ-10, 11 ಮತ್ತು 12 ರವರ ಸಮಕ್ಷಮ ಶವಪಂಚನಾಮೆಯನ್ನು ಜರುಗಿಸಿಲ್ಲ, ಛಾಯಾಚಿತ್ರಗಳನ್ನು ತೆಗೆದಿಲ್ಲ ಎಂದರೆ ಸರಿಯಲ್ಲ. ಚಾಸಾ-9, 10, 11 ಮತ್ತು 12 ರವರ ಹೇಳಿಕೆಗಳನ್ನು ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ಮೃತ ಎಂ ಚಂದ್ರಶೇಖರಪ್ಪನ ಶವಗಾವಲು ಮಾಡಲು ಚಾಸಾ-16 ರವರನ್ನು ನೇಮಕ ಮಾಡಿಲ್ಲ ಮತ್ತು ಮೃತನ ಪಿ ಎಂ ವರದಿ ಆದ ನಂತರ ಚಾಸಾ-16 ರವರು ಮೃತ ದೇಹವನ್ನು ಅವರ ರಕ್ತ ಸಂಬಂಧಿಕರಿಗೆ ಹಸ್ತಾಂತರಿಸಿಲ್ಲ ಎಂದರೆ ಸರಿಯಲ್ಲ. ಚಾಸಾ-1 ರವರ ಮರುಹೇಳಿಕೆಯನ್ನು ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ಅಪಘಾತವಾದ ಸ್ಥಳಕ್ಕೆ ಭೇಟಿ ನೀಡಿಲ್ಲ, ಚಾಸಾ-5 ಮತ್ತು 6 ರವರಿಗೆ ನೋಟೀಸನ್ನು ಜಾರಿ ಮಾಡಿಲ್ಲ, ಮತ್ತು ಚಾಸಾ-1 ರವರು ಸ್ಥಳ ತೋರಿಸಿದ ಮೇರೆಗೆ ಸ್ಥಳ ಮಹಜರ್ ಕ್ರಮವನ್ನು ಚಾಸಾ-5 ಮತ್ತು 6 ರವರ ಸಮಕ್ಷಮ ಮಹಜರ್ ಕ್ರಮ ಜರುಗಿಸಿಲ್ಲ, ಕಚ್ಚಾ ನಕಾಶೆಯನ್ನು ತಯಾರಿಸಿಲ್ಲ, ನಿಪಿ-10 ರಿಂದ 12 ಛಾಯಾಚಿತ್ರಗಳನ್ನು ತೆಗೆದಿಲ್ಲ ಎಂದರೆ ಸರಿಯಲ್ಲ. ಚಾಸಾ-5 ಮತ್ತು 6 ರವರಿಗೆ ನೋಟೀಸನ್ನು ಜಾರಿ ಮಾಡಿಲ್ಲ, ಕೂಲಂಬಿ ಉಪ ಠಾಣೆಯ ಆವರಣದಲ್ಲಿ ಚಾಸಾ-5, 6 ಮತ್ತು 1 ರವರ ಸಮಕ್ಷಮ ಟ್ರಾಕ್ಟರ್ ಇಂಜಿನ್ ನಂ.ಕೆಎ-17/ಟಿಬಿ-9599 ಮತ್ತು ಟ್ರೇಲರ್ ಮತ್ತು ಮೋಟಾರ್ ಸೈಕಲ್ ನಂ.ಕೆಎ-27/ಯು-7224 ಅನ್ನು ಅಮಾನತ್ತು ಪಡಿಸಿಕೊಂಡಿಲ್ಲ ಮತ್ತು ಅಮಾನತ್ತು ಮಹಜರ್ ಕ್ರಮವನ್ನು ಜರುಗಿಸಿಲ್ಲ, ನಿಪಿ-15 ರಿಂದ 20 ಛಾಯಾಚಿತ್ರಗಳನ್ನು ತೆಗೆದಿಲ್ಲ ಎಂದರೆ ಸರಿಯಲ್ಲ. ಶವಪಂಚನಾಮೆ, ಸ್ಥಳ ಮತ್ತು ಅಮಾನತ್ತು ಮಹಜರ್ ಸಮಯದಲ್ಲಿ ಚಾಸಾ-16 ರವರು ಛಾಯಾಚಿತ್ರಗಳನ್ನು ತೆಗೆದಿಲ್ಲ ಎಂದರೆ ಸರಿಯಲ್ಲ. ಚಾಸಾ-5 ಮತ್ತು 6 ರವರ ಹೇಳಿಕೆಗಳನ್ನು ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ಆರೋಪಿಗೂ ಈ

ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲದಿದ್ದರೂ ಸಹ ಸುಳ್ಳು ತನಿಖೆಯನ್ನು ನಡೆಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ .

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.